‘ಫ್ಲರ್ಟ್?! ಹುಹ್ಹ್... ಚೆನ್ನಾಗಿ ಹೇಳಿದೆ. ಈ ವಿಷಯದಲ್ಲಿ ನೀನೆಲ್ಲಿ ಕಮ್ಮಿ? ಕಂಡುಗೊತ್ತಿರದ ಗಂಡಸನ್ನ ಹಿಂಬಾಲಿಸಿಕೊಂಡು ಬಂದಿದ್ದೀ... ಇನ್ ಡೀಡ್ ಇಟ್ಸ್ ವೆರಿ ಇಲೇಟಿಂಗ್. ಖುಷಿ ಅನಿಸುತ್ತೆ!’

‘ಆರ್ ಯು ಮೀನಿಂಗ್ ದಟ್ ಐ ಫ್ಲರ್ಟ್ ಟೂ? ಆದರೂ ನಾನೇಕೆ ನಿನ್ನ ಬಗ್ಗೆ ಇಷ್ಟು ಆಸಕ್ತಿ ತೋರಿಸುತಿದೀನಿ? ವಾಸ್ತವದಲ್ಲಿ, ಸಮಯ ಸಂದರ್ಭ ಸನ್ನಿವೇಶದ ಜವಾಬ್ದಾರಿಯಿಲ್ಲದ ನಿನ್ನಂತಹ ಗಂಡಸೆಂದರೆ ನನಗೆ ಬಲು ಇಷ್ಟ...’

‘ಐಸೀ! ಅದು ಸರಿ... ನೀನು ನನ್ನನ್ನ ಮೊದಲು ನೋಡಿದ್ದೆಲ್ಲಿ?’

‘ಹೇಳಲೇಬೇಕಾ? ನಿಜವಾಗಲೂ ನೀನಿದನ್ನ ಕೇಳಲೇಬೇಕಾ? ಉಮ್ಮ್... ಸರಿ... ತಿಳಿದುಕೋ... ಆದರೆ ಕಣ್ಣಾರೆ ನೋಡಿದ್ದನ್ನ ಹೇಳಲಾ? ಇಲ್ಲಾ, ಸುಳ್ಳು ಸುಳ್ಳೇ ನೋಡಿದ್ದನ್ನಾ?’

‘ಅರ್ಥ ಆಗಲಿಲ್ಲ...’

‘ಮೊದಲು ನೋಡಿದ್ದು ಸಾಕ್ಷಾತ್ ಅಂತಲ್ಲದ ಒಂದು ಮಾಯಾಲೋಕದಲ್ಲಿ... ಯೂಟ್ಯೂಬಿನಲ್ಲಿ... ತೆರೆಯ ಮೇಲೆ ಕಾಣಿಸೋದು ಸತ್ಯವಲ್ಲ ಅನ್ನೋ ಎಚ್ಚರಿಕೆಯಿಂದಲೇ ನಿನ್ನನ್ನು ನೋಡಿದ್ದು!’

‘ಗ್ಗ್... ಗ್... ಗಾಡ್! ಎಲ್ಲಿ ಎಲ್ಲಿ ಎಲ್ಲಿ?’

‘ನೀನಾರೂಂತ ನನಗೆ ಚೆನ್ನಾಗಿ ಗೊತ್ತು... ನಿನ್ನ ಶೋಗಳಿಗೆ ಬಂದಿದ್ದೇನೆ. ಕನ್ಸರ್ಟ್‌ಗಳಲ್ಲಿ ಕೇಳುಗೆಯಾಗಿದ್ದೇನೆ...ಅಂಡ್ ಐ ಹ್ಯಾವ್ ಫಾಲೋಡ್ ಯು ಎವರ್ ಸಿನ್ಸ್...’

‘ಹೋಲೀ ಕವ್! ಆಮ್ಮೈ ಎನ್ ಆಬ್ಜೆಕ್ಟ್ ಆಫ್ ಯುಅರ್ ಫ್ಯಾಂಟಸಿ?’

‘ಹಾಗೇ ಅಂದುಕೋ... ಎಲ್ಲೆಲ್ಲಿ ನೀನು ಸಿಗಬಹುದೋ ಅಲ್ಲಲ್ಲೆಲ್ಲ ನಿನ್ನ ಹಿಂಬಾಲಿಸಿದ್ದೀನಿ... ನಿನ್ನ ಫೇಸ್‌ಬುಕ್ ಪ್ರೊಫೈಲನ್ನ ದಿನಕ್ಕೆರಡು ಸರ್ತಿ ಇಣಿಕುತೀನಿ ಬೆಳಿಗ್ಗೆ ಸಂಜೆ... ನಿನ್ನ ಟ್ವೀಟುಗಳನ್ನು ಫಾಲೋ ಮಾಡುತೀನಿ... ನೀನು ಸಿಕ್ಕಸಿಕ್ಕಲ್ಲೆಲ್ಲ ನಿನ್ನನ್ನು ಮುದ್ದು ಮಾಡುತೀನಿ!’

‘.....!!!’

‘ಅರೆ! ಅದೇಕೆ ಹಾಗೆ ಪೆಚ್ಚಾಗಿಬಿಟ್ಟೆ... ನಾನು ಮುದ್ದು ಮಾಡುತೀನಿ ಅಂದಿದ್ದು, ಒನ್ನಮೂನೆ ಮಿಥ್ಯೆ. ನಿನ್ನ ಮಟ್ಟಿಗಿನ ಮಿಥ್ಯೆ! ಆದರೆ ಅದೇ ನನ್ನ ಮಟ್ಟಿಗಿನ ಸತ್ಯ! ಸೋ ಇಟ್ ಈಸ್ ವರ್ಚುಅಲೀ ರಿಯಲ್... ಮಿಥ್ಯಾವಾಸ್ತವ ಅಂತಾರಲ್ಲ ಅದು!’

‘.....!!!’

‘ನಿಜದ ವಿಷಯವೇನೆಂದರೆ ನಾನು ನಿನ್ನನ್ನು ಮುದ್ದು ಮಾಡೋದು ಸತ್ಯ. ಅದು ನಿನಗೆ ಗೊತ್ತಿಲ್ಲ ಅಷ್ಟೆ... ನನ್ನ ಫೋನಿನ ಸ್ಕ್ರೀನ್‌ನಲ್ಲೂ ನೀನಿದ್ದೀಯಾ, ಗೊತ್ತಾ? ಫೇಸ್‌ಬುಕ್ಕಿನಿಂದ ಕದ್ದ ನಿನ್ನ ಫೋಟೊ ಇದು! ಇಕೋ ನೋಡು ಬೇಕಿದ್ದರೆ...’

‘ವ್ವ್... ವ್ವಾಟ್?!

‘ನೋಡು... ಎಷ್ಟು ಚೆನ್ನಾಗಿದ್ದೀಯ ಅಲ್ಲವಾ! ಆಗಾಗ ನಿನ್ನನ್ನು ನೋಡಿಕೊಂಡು ಮೈಮರೀತಿರುತೀನಿ!’

‘.....!!!’

‘ಯಾಕೆ ಏನೂ ಮಾತಾಡುತಾನೇ ಇಲ್ಲ? ನಾನೇ ಏನೆಲ್ಲ ಹೇಳಿದೆ ಅಲ್ಲವಾ... ಯೆಸ್, ಯು ಡೂ ಫ್ಯಾಸಿನೇಟ್ ಮಿ!’

‘ಜೀಸಸ್! ಇದನ್ನ ಕಳವುನೋಟ ಅನ್ನುತ್ತಾರೆ... ಸ್ಟಾಕಿಂಗ್ ಅಂತಾರಲ್ಲ ಅದು!’